<u>ದಿಃ **09.12 2025** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ.ವಿ.ವಿ.ಎಸ್ ವಕೀಲರಿಂದಃ ಅರ್ಜಿದಾರರ ಪರವಾಗಿಃ</u>

**7)** ಈ ಕೇಸಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಪ್ರ.ವ.ವರದಿಯ ಪ್ರತಿಯನ್ನು ನಿ.ಪಿ-**1** ಎಂದು, ದೂರಿನ ಪ್ರತಿಯನ್ನು ನಿ.ಪಿ-**2** ಎಂದು, ಪಿರ್ಯಾದಿಯ ಎರಡು ಮರುಹೇಳಿಕೆಗಳನ್ನು ಅವುಗಳನ್ನು ಕ್ರಮವಾಗಿ ನಿ.ಪಿ-**3** ಮತ್ತು **4** ಎಂದು ಗುರುತಿಸಲಾಯಿತು. ಘಟನಾ ಸ್ಥಳ ಪಂಚನಾಮೆಯ ಪ್ರತಿಯನ್ನು ನಿ.ಪಿ-**5** ಎಂದು, ವಾಹನ ಜಪ್ತು ಪಂಚನಾಮೆಯ ಪ್ರತಿಯನ್ನು ನಿ.ಪಿ-**6** ಎಂದು, ಮೋಟಾರು ವಾಹನಗಳ ತಪಾಸಣಾ ವರದಿಯ ಪ್ರತಿಯನ್ನು ನಿ.ಪಿ-**7** ಎಂದು, ಶವ ಮಹಜರನ್ನು ನಿ.ಪಿ-**8** ಎಂದು, ಮರಣೋತ್ತರ ಪರೀಕ್ಷಾ ವರದಿಯನ್ನು ನಿ.ಪಿ-**9** ಎಂದು, ಅಂತಿಮ ವರದಿಯ ಪ್ರತಿಯನ್ನು ನಿ.ಪಿ-**10** ಎಂದು ಗುರುತಿಸಲಾಯಿತು.

**8)** ಹನುಮವ್ವ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**11** ಎಂದು, ಹನುಮವ್ವ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**12** ಎಂದು, ಗುಡ್ಡಪ್ಪ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**13** ಎಂದು, ಗುಡ್ಡಪ್ಪ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**14** ಎಂದು, ನಾಗಪ್ಪ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**15** ಎಂದು, ನಾಗಪ್ಪ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**16** ಎಂದು, ವಿಜಯಕುಮಾರ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**17** ಎಂದು, ವಿಜಯಕುಮಾರ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**18** ಎಂದು, ಮೈಲಪ್ಪ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**19** ಎಂದು, ಮೈಲಪ್ಪ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**20** ಎಂದು, ಹನಮಂತಪ್ಪ ಇವರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**21** ಎಂದು, ಹನುಮಂತಪ್ಪ ಇವರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**22** ಎಂದು, ಹನಮವ್ವ ಇವರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**23** ಎಂದು,ಹನುಮಪ್ಪ ಇವರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**24** ಎಂದು, ನಾಗಪ್ಪ ಇವರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**25** ಎಂದು,

ಮೈಲಪ್ಪ ಇವರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ನಿ.ಪಿ-**26** ಎಂದು ಗುರುತಿಸಲಾಯಿತು. ಸರ್ವೆ ನಂಬರಃ **52/5** ಈ ಆಸ್ತಿಯ ಪಹಣಿ ಪತ್ರಿಕೆಯನ್ನು ನಿ.ಪಿ-**27** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ.ವಿ.ಎಸ್.ಎ ವಕೀಲರಿಂದಃ **2** ನೇ ಎದುರುದಾರ ಪರವಾಗಿಃ

**9) 1** ನೇ ಅರ್ಜಿದಾರಳಾದ ಹನುಮವ್ವ ನನಗೆ ತಾಯಿಯಾಗಬೇಕು ಅಂದರೆ ಸರಿ. ನನ್ನ ತಂದೆಯವರು ಈಗ ಮೃತಪಟ್ಟಿರುತ್ತಾರೆ. **2** ರಿಂದ **5** ನೇ ಅರ್ಜಿದಾರರು ನಾವೆಲ್ಲರೂ ಕೂಲಿ ಕೆಲಸ ಮಾಡುತ್ತೇವೆ. ಪ್ರತಿದಿನ ಕೆಲಸ ಮಾಡಿ ನಾವು ಒಂದು ದಿವಸಕ್ಕೆ ರೂ.**200/-** ವೇತನ ತೆಗೆದುಕೊಂಡು ಬರುತ್ತೇವೆ. ನಾವೆಲ್ಲರೂ ಮತ್ತು ನನ್ನ ತಾಯಿ ಎಲ್ಲರೂ ಒಟ್ಟಿಗೆ ವಾಸಿಸುತ್ತೇವೆ ಅಂದರೆ ಸರಿ. ನಾವೆಲ್ಲರೂ ಕೂಲಿ ಕೆಲಸ ಮಾಡಿ ಸದರಿ ಕೂಲಿ ಕೆಲಸದಿಂದ ಬಂದಂತಹ ಉತ್ಪನ್ನದಿಂದ ನಮ್ಮೆಲ್ಲರ ಒಟ್ಟುಕುಟುಂಬದ ಜೀವನ ನಡೆದುಕೊಂಡು ಹೊರಟಿರುತ್ತದೆ ಅಂದರೆ ಸರಿ. ಸರ್ವೆ ನಂಬರಃ **52/5 02** ಎಕರೆ **38** ಗುಂಟೆ ಆಸ್ತಿಯು ನಮ್ಮೆಲ್ಲರ ಜಂಟಿ ಹೆಸರಿನಲ್ಲಿ ಒಟ್ಟು ಕುಟುಂಬದ ಆಸ್ತಿ ಅಂದರೆ ಸರಿ. ಸದರಿ ಜಮೀನು ನೀರಾವರಿ ಸೌಲಭ್ಯ ಹೊಂದಿರುತ್ತದೆ ಅಂದರೆ ಸರಿ.

**10) 2025** ಮತ್ತು **2026** ನೇ ಸಾಲಿನಲ್ಲಿ ನಾವೆಲ್ಲರೂ ಮೇಲೆ ಹೇಳಿದ ನಮ್ಮ ಒಟ್ಟು ಕುಟುಂಬದ ಕೃಷಿ ಜಮೀನಿನ ಸರ್ವೆ ನಂಬರಃ **52/5 02** ಎಕರೆ **38** ಗುಂಟೆಯಲ್ಲಿ ಗೋವಿನ ಜೋಳ ಅಧಿಕ ಇಳುವರಿ ಬೆಳೆಯನ್ನು ಬೆಳೆದು ಅದರಿಂದ ಬಂದಂತಹ ಉತ್ಪನ್ನದಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದೇವೆ ಅಂದರೆ ಸರಿ. ಅದೇ ರೀತಿ ಹಿಂಗಾರಿನಿಂದ ಬರುವ ಉತ್ಪನ್ನದಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದೇವೆ ಅಂದರೆ ಸರಿ. ಅಪಘಾತದಲ್ಲಿ ಮೃತಪಟ್ಟ ಭೀಮಪ್ಪ ನಮಗೆ ತಮ್ಮನಾಗಬೇಕು. ಅಪಘಾತದಲ್ಲಿ ಮೃತಪಟ್ಟ ಭೀಮಪ್ಪ ಆತನಿಗೆ ಅಪಘಾತವಾದಾಗ ಆತನಿಗೆ ಮದುವೆಯಾಗಿರಲಿಲ್ಲ. ಅಪಘಾತವಾದಾಗ ನಮ್ಮ ತಮ್ಮನಾದ ಭೀಮಪ್ಪ ಈತನಿಗೆ **36** ವರ್ಷ ವಯಸ್ಸು ಇತ್ತು ಅಂದರೆ ಸರಿಯಲ್ಲ**,** ಆದರೆ ಆತನಿಗೆ ಅಂದಾಜು **27** ರಿಂದ **28** ವರ್ಷ ವಯಸ್ಸಿರಬಹುದು. ನನ್ನ ತಮ್ಮನಾದ ಭೀಮಪ್ಪ ಈತನು ಅಪಘಾತವಾದ ಸಮಯದಲ್ಲಿ ಆತನು ಕೆಲಸ ಮಾಡಿ ತಿಂಗಳಿಗೆ ರೂ.**55,000/-** ವೇತನವನ್ನು ತರುತ್ತಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**11)** ಅಪಘಾತವಾದ ದಿವಸ ಅಪಘಾತದಲ್ಲಿ ಭಾಗಿಯಾದಂತಹ ಮೋಟಾರ ಸೈಕಲನ್ನು ನಮ್ಮ ತಮ್ಮನಾದ ಭೀಮಪ್ಪ ಈತನೇ ನಡೆಯಿಸಿಕೊಂಡು ಹೊರಟಿದ್ದ ಅಂದರೆ

ಸರಿ. ಅಪಘಾತವಾದ ದಿವಸ ಅಪಘಾತವು ಟ್ರ್ಯಾಕ್ಟರ ಚಾಲಕನ ತಪ್ಪಿನಿಂದ ಆಗಿರುತ್ತದೆ. ಟ್ರ್ಯಾಕ್ಟರ ಚಾಲಕನು ನನ್ನ ತಮ್ಮನಾದ ಭೀಮಪ್ಪ ಈತನು ನಡೆಯಿಸಿಕೊಂಡು ಹೊರಟಿರುವ ಮೋಟಾರ ಸೈಕಲಗೆ ಹಿಂದಿನಿಂದ ಬಂದು ಟ್ರ್ಯಾಕ್ಟರ ಚಾಲಕನು ಡಿಕ್ಕಿಪಡಿಸಿರುತ್ತಾನೆ. ಅಪಘಾತವಾದ ದಿವಸ ನನ್ನ ತಮ್ಮನಾದ ಭೀಮಪ್ಪ ಈತನಿಗೆ ಮೋಟಾರ ಸೈಕಲ ನಡೆಸಲು ಚಾಲನಾ ಪರವಾನಿಗೆ ಪತ್ರ ಇರಲ್ಲಿಲ್ಲ ಅಂದರೆ ಸರಿಯಲ್ಲ. ನನ್ನ ತಮ್ಮನಾದ ಭೀಮಪ್ಪ ಈತನು ತನ್ನ ಮೋಟಾರ ಸೈಕಲನ್ನು ಅತೀ ವೇಗದಿಂದ ಚಲಾಯಿಸಿ ಒಮ್ಮೇಲೆ ಬ್ರೇಕ ಹಾಕಿದ್ದರಿಂದ ಅಪಘಾತ ಆಗಿರುತತದೆ ಅಂದರೆ ಸರಿಯಲ್ಲ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಅಂದರೆ ಸರಿ. ನಾನು ಪೊಲೀಸ ಠಾಣೆಗೆ ಹೋಗಿ ಪಿರ್ಯಾದಿ ಕೊಟ್ಟಿದ್ದೇನೆ ಅಂದರೆ ಸರಿ. ಅಪಘಾತವು ನನ್ನ ತಮ್ಮನಾದ ಭೀಮಪ್ಪ ಈತನ ತಪ್ಪು ಚಾಲನೆಯಿಂದ ಆಗಿರುತ್ತದೆ ಎಂದು ಹೇಳಿದರೆ ನಮಗೆ ವಿಮೆ ಪರಿಹಾರ ಬರುವದಿಲ್ಲ ಎಂದು ಸುಳ್ಳಾಗಿ ಟ್ರ್ಯಾಕ್ಟರ ಚಾಲಕನ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಆ ಕಾರಣದಿಂದ ಅಪಘಾತವು ಟ್ರ್ಯಾಕ್ಟರ ಚಾಲಕನ ತಪ್ಪಿನಿಂದ ಅಗಿರುತತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತವು ದಿವಸ ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ ಟ್ರ್ಯಾಕ್ಟರಗಳಿಗೆ ಜೋಡಿಸಲಾದ ಎರಡು ಟ್ರೇಲರಗಳಲ್ಲಿ ಕಬ್ಬನ್ನು ಲೋಡ ಮಾಡಿಕೊಂಡು ಹೊರಟಿತ್ತು ಅಂದರೆ ಸರಿ. ಅಪಘಾತವು ನನ್ನ ತಮ್ಮನಾದ ಭೀಮಪ್ಪ ಈತನ ತಪ್ಪು ಚಾಲನೆಯಿಂದ ಆಗಿರುವದಂರಿದ **2** ನೇ ಎದುರುದಾರ ವಿಮೆ ಕಂಪನಿಯವರು ನಮಗೆ ಪರಿಹಾರ ಕೊಡಲು ಬಾದ್ಯಸ್ಥರು ಆಗುವದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.